oc-350
T.P:-2

51st Year of Publication ★ SATYAVADI Daily, MYSORE 4

Reg No B G 155

ಶ್ರೀ

8-8-1965

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement.

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಕಾಂಗ್ರೆಸ್‌ನಲ್ಲಿ ಗುಂಪುಗಳ ಮನ್ನಣೆ ಇಲ್ಲ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಅಪೆರಾ ಟಾಕೀಸಿನವರು, ಪದ್ಮಭೂಷಣ ಸೇಠ್ ದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ಸಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವ ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಹೊಸ ಕಾಲೇಜುಗಳಿಲ್ಲ

ಇನ್ನು ಐದಾರು ವರ್ಷಗಳ ವರೆಗೆ ಇಂಜಿನಿಯರಿಂಗ್ ಅಥವಾ ತಾಂತ್ರಿಕ ಕಾಲೇಜುಗಳನ್ನು ಸ್ಥಾಪಿಸಲು ಅನುಮೋದನೆ ನೀಡುವುದಿಲ್ಲವೆಂದು ರಾಜ್ಯಸಭೆಯಲ್ಲಿ ಶಿಕ್ಷಣ ಮಂತ್ರಿ ಶ್ರೀ ತ್ರಿಗುಣ ಸೇನ್ ನಿನ್ನೆ ತಿಳಿಸಿದರು.

ಭತ್ಯ ಹೆಚ್ಚಿಸಲು ಶಿಫಾರಸು

ಸಂಸತ್ ಸದಸ್ಯರ ದಿನಭತ್ಯವನ್ನು ರೂ 31 ರಿಂದ 51 ಕ್ಕೆ ಏರಿಸಬೇಕೆಂದು ಸಂಸತ್ ಸದಸ್ಯರ ಜಂಟಿ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

★

ವಿಶೇಷ ಸಭೆ

ಗೋರಕ್ಷಣಾ ಸಮಿತಿಗೆ ಶ್ರೀ ಪುರಿ ಶಂಕರಾಚಾರ್ಯರು ರಾಜೀನಾಮೆ ನೀಡಿರುವುದರಿಂದ ಉಂಟಾಗಿರುವ ಬಿಕ್ಕಟ್ಟಿನ ಪರಿಶೀಲನೆಗಾಗಿ ಈ ದಿನ ಮಂತ್ರಿಮಂಡಲದ ವಿಶೇಷ ಸಭೆಯನ್ನು ಶ್ರೀಮತಿ ಇಂದಿರಾ ಗಾಂಧಿಯವರು ಕರೆದಿರುವರು,

★

ಬಂದೂಕ ಶಿಕ್ಷಣ

ಕೇರಳದ ಮಾರ್ಕ್ಸಿಸ್ಟ್ ಪಕ್ಷ ತನ್ನ ಗೋಪಾಲ ಸೇನೆಗೆ ಬಂದೂಕ ಶಿಕ್ಷಣ ಕೊಡುವ ಕಾರ್ಯಕ್ರಮ ಹೊಂದಿದೆ.

★

ಇಬ್ಬರು ಹೆಂಡಿರು

ಕೇಂದ್ರದ ನಲವತ್ತು ಅಧಿಕಾರಿಗಳಿಗೆ ಇಬ್ಬರು ಹೆಂಡಂದಿರಿದ್ದಾರೆ.

●

ಮಗುವಿನ ಮರಣ

ಕಡಪದ ಹತ್ತಿರ ವೆಂಪಾಲಿ ಗ್ರಾಮದಲ್ಲಿ ಅಗ್ನಿ ಅನಾಹುತದಿಂದ 41 ಗುಡಿಸಲು ಭಸ್ಮವಾಗಿ ಒಂದು ವರ್ಷದ ಮಗು ಸಜೀವ ದಹನವಾಯಿತು.

ಆಗಮನ

ವಿದೇಶ ಪ್ರವಾಸ ಮುಗಿಸಿಕೊಂಡು ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ನವ ದೆಹಲಿಗೆ ವಾಪಸಾದರು.

ಶ್ರೀ ಬಿ. ಡಿ. ಜತ್ತಿಯವರೊಡನೆ ಇತ್ತೀಚಿಗೆ ತಾವು ಮಾತುಕತೆ ನಡೆಸಿದುದಾಗಿ ಮತ್ತು ತಮ್ಮ ಮಂತ್ರಿಮಂಡಲಕ್ಕೆ ಈರ್ವರು ಮಂತ್ರಿಗಳನ್ನು ತೆಗೆದುಕೊಳ್ಳಲು ಒಪ್ಪಿದರು ಎಂಬ ವರದಿಯನ್ನು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರು ನಿನ್ನೆ ನಿರಾಕರಿಸಿದರು. ಜತ್ತಿ ಗುಂಪು ಇದೆ ಎಂಬುದನ್ನು ಮೊಟ್ಟಮೊದಲನೆಯದಾಗಿ ನಾನು ಮನ್ನಣೆ ನೀಡಲಾರೆ ಎಂದು ಪಾಟೀಲರು ತಿಳಿಸಿದರು.

★

ಗುಂಡಿನೇಟಿನಿಂದ ಸಾವು

ಜಯಂಕೊಂಡನ್ ತಾಲ್ಲೋಕನ್ನು ಉದಯಾರ್ ಪಾಳ್ಯಂ ತಾಲ್ಲೋಕ್ ಎಂಬ ಹೆಸರನ್ನಿಟ್ಟು ಕರೆಯಬೇಕೆಂಬ ಚಳುವಳಿ ಸಂಬಂಧದಲ್ಲಿ ತಿರುಚಿ ಜಿಲ್ಲೆಯ ಉದಯಾರ್ ಪಾಳ್ಯಂನಲ್ಲಿ ನಿನ್ನೆ ಮಧ್ಯಾಹ್ನ ಗುಂಪು ಚದುರಿಸಲು ಪೋಲೀಸರು ಗುಂಡು ಹಾರಿಸಲು ಇಬ್ಬರು ಸತ್ತು ಇಬ್ಬರಿಗೆ ಗಾಯವಾಗಿದೆ.

★

ಬಂದಿಗಳ ಪರಾರಿ

ರಾಮಾವರಂ ಸಬ್ ಜೇಲಿನಿಂದ ಬಂದಿಗಳಿಬ್ಬರು ಫರಾರಿ ಆದರು. ಅವರನ್ನು ಹಿಡಿಯಲು ಪತ್ತೆ ತರದೂದು ನಡೆಯುತ್ತಿದೆಯೆಂದು ಹೈದರಾಬಾದು ವಾರ್ತೆ.

★

ಪಾಕ್‌ಗೆ ಎಚ್ಚರಿಕೆ

ಪಾಕೀಸ್ತಾನವು ರಷ್ಯದೊಡನೆ ಹೊಂದುತ್ತಿರುವ ಮೈತ್ರಿ ಬಗ್ಗೆ ಚೀಣಾ ವಿದೇಶ ಮಂತ್ರಿ ಎಚ್ಚರಿಕೆ ನೀಡಿರುವರೆಂದು ಹಾಂಕಾಂಗ್ ವಾರ್ತೆ ತಿಳಿಸುತ್ತದೆ. ಭಾರತದೊಡನೆ ಯಾವ ರೀತಿಯ ಶಾಂತಿ ವ್ಯವಸ್ಥೆ ಮಾಡಿಕೊಳ್ಳದಿರುವಂತೆ ಚೀಣಾ ಪ್ರಧಾನಿ ಚೌರವರು ಆಸಕ್ತರಾಗಿರುವರೆಂದು ವರದಿಯಾಗಿದೆ.

ಸರ್ಕಾರಿ ಬಸ್‌ಗೆ ಚಳಿ ಜ್ವರ

ನಾಡಿ ಹೊಡೆದುಕೊಳ್ಳುವ ಮನುಷ್ಯರಿಗೆ ಪ್ರಾಣಿಗಳಿಗೆ ಜ್ವರ ಬರುವುದು ಸಹಜ. ಆದರೆ ನಿರ್ಜೀವವಾದ, ಎಣ್ಣೆಯಿಂದ ನಡೆಯುವ ಬಸ್‌ಗಳಿಗೆ ಚಳಿ ಜ್ವರ ಬರುವ ಸಮಾಚಾರ ಕೇಳಿದ್ದೀರಾ ?

ಈಗ ಕೇ. ರಾಜ್ಯ ಸಾರಿಗೆ ಇಲಾಖೆಯ ಮೈಸೂರು ವಿಭಾಗಕ್ಕೆ ಸೇರಿದ ಬಸ್ ಲೈನ್ ಒಂದರಲ್ಲಿ ಬಸ್ ಓಡಿಸುವುದನ್ನು ಈಗ ಕೆಲವು ದಿನಗಳಿಂದ ನಿಲ್ಲಿಸಿದೆ.

ಹಾಸನದಿಂದ ಸರಗೂರಿಗೆ ಹೋಗುವ ಬಸ್ ಮಧ್ಯಾಹ್ನ 2 ಘಂಟೆಗೆ ಮೈಸೂರಿನಿಂದ ಸರಗೂರಿಗೆ ಹೊರಡುತ್ತಿತ್ತು. ಈಗ ಅದು ಹೋಗುತ್ತಿಲ್ಲ. ವಿಭಾಗ ಅಧಿಕಾರಿಯವರನ್ನು ಯಾಕೆ ಈ ಬಸ್ ಹೋಗುತ್ತಿಲ್ಲ, ಕೇಳೋಣ ಎಂದು ಫೋನ್ ಮಾಡಿದರೆ " ಇಲ್ಲ " "ಮೀಟಿಂಗ್‌ನಲ್ಲಿ ಇದ್ದಾರೆ" ಜನರಲ್ ಮ್ಯಾನೇಜರ್‌ಗೆ ರಿಂಗ್ ಮಾಡಿದರೆ ಪತ್ರಿಕೆಯವರು ಎಂದರೆ ಫೋನ್ ಹಾಗೇ ಕೆಳಗೆ ಇಳಿಯುವುದು. ಇದಕ್ಕೆ ಕಾರಣವೇನು ಎಂದು ವಿಚಾರಿಸಲು " ಸಾಮಾನ್ಯವಾಗಿ ಪತ್ರಿಕೆಯಿಂದ ಫೋನ್ ಬಂದರೆ ನಮಗೆ ಜಾಹೀರಾತು ಬಂದಿಲ್ಲ ಎಂದು ಹೇಳುವುದಕ್ಕೆ. ಆದ್ದರಿಂದ ಫೋನ್ ಕೆಳಗೆ ಇಳಿಯುವುದು " ಎಂದು ತಿಳಿಯಿತು.

ಜನರ ತೊಂದರೆ ಸಹಿಸಲಾರದೆ, ಕ್ರಮ ಮತ್ತು ಅಕ್ರಮ ಟ್ಯಾಕ್ಸಿಗಳಿಗೆ ಜನ ದುಬಾರಿ ಹಣ ತೆತ್ತು ಹೋಗುವುದನ್ನು ನೋಡಲಾರದೆ, ಕಾಂಗ್ರೆಸ್ ಆಡಳಿತವನ್ನು ನಿಂದಿಸುವುದನ್ನು ಕೇಳಲಾರದೆ ಬಸ್‌ಗೆ ಸಂಬಂಧಿಸಿದವರೋರ್ವರನ್ನು ಕೇಳಲು " ಸರಗೂರು ಬಸ್ ಹೋಗುತ್ತಿಲ್ಲ. ಮಳೆಗಾಳಿ " ಎಂದರು. ಯಾರಿಗೆ ಗೊತ್ತು ? ಸರ್ಕಾರಿ ಬಸ್‌ಗೂ ಚಳಿ ಜ್ವರ ಬರಬಹುದು !

ಹಿಂದೂಗಳ ಆಚಾರ

ಸಂಗ್ರಾಹಕರು— ' ಶಾಸ್ತ್ರಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಇಲ್ಲಿ ನಾವು ವಿಚಾರ ಮಾಡಬೇಕಾದುದು ಒಂದು ಅಂಶ ಮಾತ್ರ. ನಮ್ಮ ಮನೆ, ಆಸ್ತಿ, ಹೆಂಡತಿ, ಮಕ್ಕಳು ಮುಂತಾದ ಎಲ್ಲಾ ವ್ಯಾಮೋಹವನ್ನೂ ಬಿಟ್ಟು ಇವರು ಮತಪ್ರಚಾರ ಮಾಡುತ್ತಿದ್ದಾರೆ. ಕೆಲವು ಕಡೆ ಹಾಸ್ಯ ಮಾಡಬಹುದು, ಬೈಯಬಹುದು, ಹೊಡೆಯಬಹುದು. ಆದರೆ ಅವೆಲ್ಲವನ್ನೂ ಸಹಿಸಿಕೊಂಡು ತಮ್ಮ ಕೆಲಸವನ್ನು ಮಾಡಿಕೊಂಡು ಹೋಗುತ್ತಾರೆ. ಇಲ್ಲಿಯೇ ಇದ್ದು ಸಾಂಸಾರಿಕ ಜೀವನ ನಡೆಸುತ್ತಿರುವ ಹಿಂದೂಗಳು ತಮ್ಮ ಬಂಧುಗಳಲ್ಲಿ ಧರ್ಮಪ್ರಚಾರ ಮಾಡುವುದಿರಲಿ, ತಮ್ಮ ಧರ್ಮದ ಬಗ್ಗೆ ವಿಚಾರಗಳನ್ನು ತಿಳಿಯಲೂ ಆಸಕ್ತಿಯಿಲ್ಲ. ಇವರಿಗೆ ಧಾರ್ಮಿಕ ವಿಚಾರಗಳ ಗ್ರಂಥಗಳನ್ನು ಓದಲು ವಿರಾಮ ದೊರಕುವುದಿಲ್ಲ. ಹೀಗಾಗಲು ಕಾರಣವೇನು ?

ಕ್ರಿಶ್ಚಿಯನ್ನರು ತಮ್ಮ ಮತದ ಪಾಲನೆಗೆ ಬೇಕಾದ ಕೆಲವು ಆಚಾರಗಳನ್ನು ತಪ್ಪದೇ ಪಾಲಿಸುತ್ತಾರೆ. ಅದರಿಂದ ಮತದ ಬಗ್ಗೆ ದೃಢವಾದ ನಂಬಿಕೆ ಬರುತ್ತದೆ. ಹಿಂದುಗಳಾದರೋ ತಮ್ಮ ಆಚಾರಗಳನ್ನು ಬಿಡುತ್ತಾ ಬರುತ್ತಿರುವುದರಿಂದ ತಮ್ಮ ಧರ್ಮದಲ್ಲಿ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ. ಅಮೇರಿಕಾದ ಅಧ್ಯಕ್ಷರು ಭಾನುವಾರ ಚರ್ಚಿಗೆ ಪ್ರಾರ್ಥನೆ ಮಾಡಲು ಹೋಗುವುದು ಸಾಮಾನ್ಯ. ಭಾರತದ ಪ್ರಧಾನಿ ಮಾತ್ರ ಎಂದೂ ದೇವಾಲಕ್ಕೆ ಪೂಜೆಗೆ ಹೋಗಲು ಸಾಧ್ಯವಿಲ್ಲ. ನಮ್ಮ ಆಚಾರಗಳು ಶರೀರದ ಆರೋಗ್ಯ ರಕ್ಷಣೆಗೂ, ಚಿತ್ತಶುದ್ಧಿಗೂ, ಬುದ್ಧಿ ಮತ್ತು ಧೀಶಕ್ತಿ ಬೆಳೆಯಲು ಅನುಕೂಲವಾಗುವಂತೆ ಸಿದ್ಧಪಡಿಸಲ್ಪಟ್ಟಿವೆ. ಇಂಥಾ ಆಚಾರಗಳನ್ನು ಬಿಡುವುದರಿಂದ ಆರೋಗ್ಯ ಕೆಡುತ್ತದೆ. ಶುದ್ಧತೆ ಹೋಗಿ ಕೊಳಕುತನ ಅಭ್ಯಾಸವಾಗುತ್ತದೆ. ತತ್ವಪಾಲನೆಗಾಗಿ ಸಿದ್ಧನಾಗುವ ದೃಢತೆ ಮಾಯವಾಗುತ್ತದೆ. ಬುದ್ಧಿಶಕ್ತಿಯನ್ನು ಕಳೆದುಕೊಂಡು ಅಪ್ರಯೋಜಕರಾಗುತ್ತೇವೆ.

Quality Printing — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the ' Satyavadi ' is to be celebrated very soon

. The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi, Sri Opera Talkies. Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

ಅಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ವುಡ್‌ಲ್ಯಾಂಡ್ಸ್ ಅಮೋಘ 6 ನೇ ವಾರ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಛೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಆಪೆರ — ಜನಪ್ರಿಯ 5 ನೇ ವಾರ

ಚಿತ್ತಾಕರ್ಷಕ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ

ಶ್ರೀದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಾಣಿದಯೆ, [illegible], ಪಶುವೈದ್ಯ, ವಿಚಾರಗಳ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು [illegible] ಚಂದಾ ಪಾವತಿ ಮಾಡಬೇಕಾಗಿ ವಿನಂತಿ

ಡಾ|| ಟಿ ಎಸ್ ನಾರಾಯಣ್, ಶ್ರೀ ಟಿ ಎಸ್ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ ಹೊಂಗನೂರು
ಗೋರಕ್ಷಣಾ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣಾ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

……

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚು ಹೆಚ್ಚಾಗಿ ನಡೆಯಲಿ

Edited, Printed & Published by Dharmaprachara Nirata
M S Krishna Rao (Proprietor) at the Satyavadi Press
Chamarajapuram, Mysore-4